**ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ಎಸ್.ಪಿ. ವಕೀಲರಿಂದಃ**

ನಾನು ಈಗ ಯಾವುದೇ ವ್ಯವಸಾಯ ಮತ್ತು ಕೆಲಸ ಮಾಡುವುದಿಲ್ಲ. ಪ್ರತಿವಾದಿಯವರು ಕೃಷಿಕರು ಅಂದರೆ ಸಾಕ್ಷಿಯು ಅಡಿಕೆ ವ್ಯಾಪಾರ ಮತ್ತು ಕೃಷಿ ಕೆಲಸ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಮನೆಯ ಮೌಲ್ಯವು ಈಗ 35 ಲಕ್ಷ ರೂಪಾಯಿ. ನಾನು ಮನೆ ಕಟ್ಟಲು ತಂದಿದ್ದ ಸಾಮಾಗ್ರಿಗಳ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯವರು ನನ್ನ ವಿರುದ್ಧ ದಾಖಲಿಸಿದ ಹಲವಾರು ದೂರುಗಳ ಪ್ರತಿಯನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಅದರಿಂದ ನನ್ನ ಮಾನ ಹಾನಿಯಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ದಾವೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ ಎಂದು ಕಾಣಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈಗ ನಾನು ನನ್ನ ಮಾವನ ಮನೆಯಲ್ಲಿ ವಾಸವಾಗಿರುತ್ತೇನೆ. ನಾನು ದಾವೆಯಲ್ಲಿ ಹೇಳಿದ ಹಾಗೆ ಮನೆ ಕಟ್ಟುವ ಕಾಲಕ್ಕೆ ಮಾವನ ಮನೆಯಲ್ಲಿದ್ದು ಮನೆಯನ್ನು ಕಟ್ಟುತ್ತಿರುತ್ತೇನೆ ಅಂದರೆ ಸರಿ. ನಾನು  ದಾವೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ ಎಂದು ನಮೂದಿಸಿರುವುದು ಸುಳ್ಳು ಅಂದರೆ ಸರಿಯಲ್ಲ. ನಾನು ಕಟ್ಟಿರುವ ಮನೆಯ ದಕ್ಷಿಣಕ್ಕೆ ಪ್ರತಿವಾದಿಯವರ ಮನೆ ಬರುತ್ತದೆ ಅಂದರೆ ಸಾಕ್ಷಿಯು ನಮ್ಮ ಮಾವನ

ಮನೆ ಬರುತ್ತದೆ. ಉತ್ತರಕ್ಕೆ ಪ್ರತಿವಾದಿಯವರ ಮನೆ ಇದೆ ಎಂದು ಉತ್ತರಿಸುತ್ತಾರೆ. ನಾನು ದಕ್ಷಿಣ ದಿಕ್ಕಿಗೆ ಯಾವುದೇ ಸೆಟ್ ಬ್ಯಾಕ್ ಬಿಡದೆ ಮನೆ ಕಟ್ಟಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎರಡು ಅಡಿ ಬಿಟ್ಟು ಮನೆ ಕಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ನನ್ನ ಮನೆ ಕಟ್ಟಲು ಯಾವುದೇ ತೊಂದರೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಕಟ್ಟಿರುವ ಮನೆಯನ್ನು ಮಹೇಶ ಗೋಖಲೆ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ ಅಂದರೆ ಸಾಕ್ಷಿಯು ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ಅವರಿಗೆ ಸ್ವಾಧೀನ ಸಹ ನೀಡಿರುತ್ತೇನೆ ಅಂದರೆ ಸರಿ. ಸದರಿ ಕರಾರು ಪತ್ರದಲ್ಲಿ ನನ್ನ ಗೃಹಕೃತ್ಯದ ಅಡಚಣೆಗೋಸ್ಕರ ಮಾರಾಟ ಮಾಡಿರುತ್ತೇನೆ ಎಂದು ನಮೂದಿಸಿರುತ್ತೀರಿ ಅಂದರೆ ಸರಿ. ಪ್ರತಿವಾದಿಯವರಿಗೆ ತೊಂದರೆ ನೀಡಲು ಈ ದಾವೆಯನ್ನು ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ನನ್ನ ವೈಯಕ್ತಿಕ ಕಾರಣಗಳಿಂದ ಮನೆ ಕಟ್ಟಲು ತೊಂದರೆ ಆಗಿದೆ ಹೊರತು ಪ್ರತಿವಾದಿಯವರಿಂದ ಅಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯವರ ಕೃತ್ಯದಿಂದ ನನ್ನ ಮಾನಹಾನಿಯಾಗಿದೆ ಎಂಬುದು ಸುಳ್ಳು ಅಂದರೆ ಸರಿಯಲ್ಲ. ನಾನು ಕೇಳಿರುವ ರೂ.50,000/- ಪರಿಹಾರವನ್ನು ಪ್ರತಿವಾದಿಯವರು ನೀಡಲು ಭಾದ್ಯಸ್ಥರಲ್ಲ ಅಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**